

# ನವತಾರೆ ರಮಿಕಾ

‘ಪ್ರೇಮದ ಊರಲ್ಲಿ’ ಸಿನಿಮಾ ಮೂಲಕ ಬೆಳ್ಳಿತೆರೆ ಪ್ರವೇಶಿಸಿರುವ ರಮಿಕಾ ಶಿವು, ಧಾರಾವಾಹಿಗಳ ಮೂಲಕ ಬಣ್ಣದ ನಂಟು ಬೆಳೆಸಿಕೊಂಡವರು. ಚೊಚ್ಚಲ ಸಿನಿಮಾದಲ್ಲಿ ಅವರೀಗ ತೊಡಗಿಕೊಂಡಿದ್ದು, ‘ಸುಧಾ’ದೊಂದಿಗೆ ಮಾತನಾಡಿದ್ದಾರೆ.



◆ ‘ಪ್ರೇಮದ ಊರಲ್ಲಿ’ ಸಿನಿಮಾದಲ್ಲಿ ನಿಮ್ಮನ್ನು ಸೆಳೆದ ಅಂಶ ಯಾವುದು?

ಈ ರೀತಿಯ ಕಥೆಗಾಗಿ ಬಹಳ ದಿನಗಳಿಂದ ಕಾಯುತ್ತಿದ್ದೆ. ರೋಲ್ ಇರುವಂಥ, ನಟನೆಗೆ ಅವಕಾಶವಿರುವಂಥ ಸಿನಿಮಾವೊಂದನ್ನು ನಿರೀಕ್ಷಿಸುತ್ತಿದ್ದೆ. ನಾನು ಏನೇನು ನಿರೀಕ್ಷಿಸಿದ್ದೆನೋ ಅವೆಲ್ಲ ಅಂಶಗಳು ಈ ಸಿನಿಮಾದಲ್ಲಿದ್ದವು. ಇನ್ನೊಂದು ಗಮನಸೆಳೆದ ಅಂಶವೆಂದರೆ, ಇದರಲ್ಲಿ ಪ್ರತಿ ಪಾತ್ರ ಕೂಡ ಸಮನಾಗಿದೆ, ಎಲ್ಲ ಪಾತ್ರವೂ ಹೈಲೈಟ್ ಆಗುತ್ತವೆ. ಪ್ರಕೃತಿಯ ನಡುವೆ ಚಿತ್ರೀಕರಣ ಮಾಡಿದ್ದೇವೆ. ಸಿನಿಮಾ ಆರಂಭವಾದಾಗಿನಿಂದ ಕೊನೆಯವರೆಗೂ ಎಲ್ಲೂ ಗಮನ ಬೇರೆಡೆಗೆ ಹೋಗುವುದಿಲ್ಲ. ಒಂದೊಂದು ಪಾತ್ರವನ್ನೂ ಪ್ರೇಕ್ಷಕರು ಫೀಲ್ ಮಾಡಲು ಆರಂಭಿಸುತ್ತಾರೆ.

◆ ನಿಮ್ಮ ಚೊಚ್ಚಲ ಸಿನಿಮಾದಲ್ಲಿ ಪಾತ್ರವನ್ನು ನಿಭಾಯಿಸಿದ ಪರಿ...

ನಾನು ವಸಂತ ಎಂಬ ರೋಲ್ ಮಾಡುತ್ತಿದ್ದೇನೆ. ಅವಳನ್ನು ನೋಡುವಾಗ ಪ್ರೇಕ್ಷಕರು ಸಂಪೂರ್ಣ ವಸಂತ ಆಗಿಬಿಡುತ್ತಾರೆ. ವಸಂತ ಮಾತ್ರವಲ್ಲ, ಸಿನಿಮಾದ ಒಂದೊಂದು ಪಾತ್ರವೂ ಪ್ರೇಕ್ಷಕರೊಳಗೆ ಇಳಿದು ಅವರೇ ಆ ಪಾತ್ರವಾಗಿಬಿಡುವಂತೆ ಬರೆದಿದ್ದಾರೆ. ಈ ಅಂಶವೇ ಸಿನಿಮಾದ ಸೌಂದರ್ಯ. ನನ್ನದು ಬಹಳ ಭಾವನಾತ್ಮಕ ಪಾತ್ರ. ಹಲವು ಪಲ್ಲಟಗಳಿವೆ. ಇದರಲ್ಲಿ ಭಿನ್ನ ಭಿನ್ನ ಶೇಡ್ ಪ್ಲೇ ಮಾಡಲು ಅವಕಾಶ ಸಿಕ್ಕಿದೆ. ಒಂದು ಕಡೆ ತುಂಬಾ ರಗಡ್ ಆಗಿದ್ದೇನೆ, ಇನ್ನೊಂದು ಕಡೆ ನಾಚುವ ಹುಡುಗಿಯಾಗಿದ್ದೇನೆ... ನಟನಾ ಅವಲಂಬಿತ ಉತ್ತಮ ಪಾತ್ರ ಸಿಕ್ಕಿದೆ. ಅತ್ಯುತ್ತಮ ಅನುಭವ ನೀಡಿದೆ.

◆ ಬಣ್ಣದ ಲೋಕ ನಿಮ್ಮನ್ನು ಬರಸೆಳೆದದ್ದು ಹೇಗೆ?

ನಾನು ಮೈಸೂರಿನವಳು. ನನ್ನ ತಂದೆ ತಾಯಿಗೆ ಮೊದಲಿನಿಂದಲೂ ನಾನು ಸಿನಿಮಾರಂಗಕ್ಕೆ ಬರಬೇಕೆಂಬ ಆಸೆ ಇತ್ತು. ಅಮ್ಮ ‘ಮಿಸ್ ಮಾಡೆಲ್ ಆಫ್ ಕರ್ನಾಟಕ’ ಆಗಿದ್ದರು. ಅವರಿಗೆ ಅನಿವಾರ್ಯ ಕಾರಣದಿಂದ ಸಿನಿಮಾರಂಗಕ್ಕೆ ಬರಲು ಆಗಿರಲಿಲ್ಲ. ಅವರ ಆಸೆಯನ್ನು ನನ್ನಲ್ಲಿ ಕಾಣಲು ಪ್ರೋತ್ಸಾಹ ತುಂಬುತ್ತಾ ಬಂದರು. ನನ್ನ ಕುಟುಂಬದಲ್ಲೆಲ್ಲ ನನ್ನನ್ನು ಸುಮ್ಮನೆ ‘ಹೀರೋಯಿನ್’ ಎಂದು ಕರೆಯುತ್ತಿದ್ದರು. ಅದೇನೋ ತಲೆಯಲ್ಲಿ ಕುಳಿತುಬಿಟ್ಟಿತ್ತು– ಸಿನಿಮಾರಂಗಕ್ಕೆ ಬರಬೇಕೆಂದು.

8ನೇ ತರಗತಿಯಲ್ಲಿರುವಾಗ ಪೋಕ್ಸೊ ಕಾಯ್ದೆ ಸಂಬಂಧಿತ ಸಿನಿಮಾದಲ್ಲಿ ನಟಿಸಿದ್ದೆ. ಪಿಯು ಶಿಕ್ಷಣವನ್ನು ಮೈಸೂರಿನಲ್ಲಿ ಮುಗಿಸಿದೆ. 18 ವರ್ಷವಿದ್ದಾಗ ‘ಪಾರು’ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. ಆಮೇಲೆ ಬೆಂಗಳೂರಿಗೆ ಪದವಿ ಶಿಕ್ಷಣಕ್ಕೆ ಬಂದು ಕರೆಸ್ಪಾಂಡೆನ್ಸ್ ಮಾಡಿದೆ. ‘ಪಾರು’ ನಂತರ ‘ನಮ್ಮನೆ ಯುವರಾಣಿ’, ‘ನೀನಾದೆ ನಾ’ ಧಾರಾವಾಹಿ ಅವಕಾಶಗಳು ಸಿಕ್ಕಿದವು. ‘ನೀನಾದೆ ನಾ’ ಧಾರಾವಾಹಿಯಲ್ಲಿ ನಟಿಸುತ್ತಿದ್ದ ಸಮಯದಲ್ಲಿಯೇ ‘ಪ್ರೇಮದ ಊರಲ್ಲಿ’ ಸಿನಿಮಾಗೆ ಅವಕಾಶ ಬಂದಿದ್ದು.

◆ ಕಿರುತೆರೆ ಅನುಭವ ಹೇಗಿತ್ತು?

ಕಿರುತೆರೆ ಹಲವು ಅಮೂಲ್ಯ ಅನುಭವಗಳನ್ನು ನೀಡಿದೆ. ಸಿನಿಮಾಗೆ ಬರಲು ಕಿರುತೆರೆಯೇ ಕಾರಣ. ಆದರೆ ನನ್ನ ಅನುಭವದಲ್ಲಿ ಕಿರುತೆರೆ, ಸಿನಿಮಾ, ಎರಡೂ ಸಂಪೂರ್ಣ ಬೇರೆ ಬೇರೆ ಪ್ರಪಂಚ.

◆ ಖುಷಿ ಆಗಿದ್ದ ನೀವು ರಮಿಕಾ ಆಗಿ ಹೆಸರು ಬದಲಿಸಿಕೊಂಡಿದ್ದೀರಿ. ಕಾರಣ?

ಇದು ನನ್ನ ಕುಟುಂಬದವರ ನಿರ್ಧಾರ. ‘ರಮಿಕಾ’ ಆಗಿ ಹೆಚ್ಚು ಪ್ರೇಕ್ಷಕರ ಮನಸ್ಸನ್ನು ಮುಟ್ಟುವ ಹಂಬಲ ನನ್ನದು.

◆ ಯಾವ ರೀತಿಯ ಪಾತ್ರಗಳಲ್ಲಿ ನಿಮ್ಮನ್ನು ಬಿಂಬಿಸಿಕೊಳ್ಳುವ ಆಸೆ?

ಹತ್ತು ಸಿನಿಮಾ ಮಾಡುವ ಬದಲು ಜನರ ಮನದಲ್ಲಿ ಅಚ್ಚಳಿಯದೇ ಉಳಿಯುವಂಥ ಒಂದು ಸಿನಿಮಾದಲ್ಲಿ ಉತ್ತಮ ಪಾತ್ರದಲ್ಲಿ ತೊಡಗಿಕೊಳ್ಳಬೇಕು. ಕಥೆಯಲ್ಲಿ ಆತ್ಮವಿರಬೇಕು. ಅದನ್ನೇ ನಾನು ಅರಸುವುದು. ಕಥೆ ನನ್ನ ಮನಸ್ಸಿಗೆ ಸಮಾಧಾನ ಆಗಬೇಕು. ಸಿನಿಮಾದಲ್ಲಿ ಕಲಿಯಲು ಅವಕಾಶವಿರಬೇಕು.

◆ ಈ ಸಿನಿಮಾ ಹೊರತಾಗಿ ಬೇರೆ ಪ್ರಾಜೆಕ್ಟ್‌ಗಳು...

ತಮಿಳು ಸಿನಿಮಾವೊಂದರಲ್ಲಿ ತೊಡಗಿದ್ದೇನೆ. ಜೂನ್‌ನಲ್ಲಿ ಆ ಸಿನಿಮಾ ಚಿತ್ರೀಕರಣ ಆರಂಭವಾಗಲಿದೆ. ಇನ್ನೊಂದು ಕನ್ನಡ ಸಿನಿಮಾ ಇದೆ. ಇದೇ ಮೇ ತಿಂಗಳಿನಲ್ಲಿ ಆರಂಭವಾಗುತ್ತಿದೆ.

■ ಎಸ್ಸೆನ್